

# ಗಾಂಧಿನಗರ ಪೋಸ್ಟ್

■ ರಘು

# ಸುದೀಪ್ ಸಿಂಗಂ ಸಂಗ



'ಕನ್ವರ್‌ಲಾಲ್' ಚಿತ್ರದ ಗುಂಗಿನಿಂದ ಸದ್ಯಕ್ಕೆ ಹೊರಬಂದಿರುವ ಸುದೀಪ್ 'ಕೆಂಪೇಗೌಡ'ನಿಗೆ ಮನಸು ಕೊಟ್ಟಿದ್ದಾರೆ. ತಮಿಳಿನ 'ಸಿಂಗಂ' ಚಿತ್ರದ ರೀಮೇಕ್ ಈ ಕೆಂಪೇಗೌಡ. 'ಜಸ್ಟ್ ಮಾತ್ ಮಾತಲ್ಲಿ' ಚಿತ್ರದ ನಿರ್ಮಾಪಕ ಶಂಕರಲಿಂಗೇಗೌಡರ ನಷ್ಟದ ಬಾಬತ್ತು ಚುಕ್ತಾ ಮಾಡಿಕೊಡುವ ಉದ್ದೇಶದಿಂದ ಸುದೀಪ್ 'ಸಿಂಗಂ' ಸಂಗ ಮಾಡಿದ್ದಾರೆ.

'ಕನ್ವರ್‌ಲಾಲ್'ನದು ಮುಂದುವರಿದ ಕಥೆಯಾ ಅಥವಾ ಕುಂಭಕರ್ಣನ ವ್ಯಥೆಯಾ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ.



# ಮೀರಾ ಮುರಳಿ ಮಹೇಶ್

ಮಗೇಶ್ ಈಗ ಮಹೇಶ್ ಆಗಿದ್ದಾರೆ. ಜೊತೆಗೆ ರಾವ್ ಕೂಡ ಅಂಟಿಕೊಂಡಿದೆ. 'ಇದರಲ್ಲೇನೂ ವಿಶೇಷವಿಲ್ಲ. ನನ್ನ ಮೂಲ ಹೆಸರು ಮಹೇಶ್ ಎಂದೇ. ಕಾಗುಣಿತ ದೋಷದಿಂದಾಗಿ ಮಗೇಶ್ ಆಗಿತ್ತು. ಇದೂ ಒಂಥರಾ ಚೆನ್ನಾಗಿದೆ ಎಂದು ಉಳಿಸಿಕೊಂಡಿದ್ದೆ. ಈಗ ಮತ್ತೆ ಮೂಲ ಹೆಸರಿಗೆ ಮರಳುತ್ತಿದ್ದೇನೆ' ಎಂದರು ಮಹೇಶ್ ರಾವ್. ಅವರು ಮಾತನಾಡಿದ್ದು 'ಮುರಳಿ ಮೀಟ್ಸ್ ಮೀರಾ' ಚಿತ್ರದ ಮುಹೂರ್ತದ ಸೆಟ್‌ನಲ್ಲಿ.

'ಮುರಳಿ ಮೀಟ್ಸ್ ಮೀರಾ' ಮಹೇಶ್ ನಿರ್ದೇಶಿಸುತ್ತಿರುವ ಎರಡನೇ ಚಿತ್ರ. ಈ ಮೊದಲು ನಿರ್ದೇಶಿಸಿದ್ದ 'ಧಿಮಾಕು' ಹೆಸರು ತಂದುಕೊಟ್ಟರೂ ಅವಕಾಶ ಗಿಟ್ಟಿಸಿಕೊಡಲಿಲ್ಲ. ಈಗ ಮತ್ತೊಂದು ಪ್ರೇಮಕಥೆಯೊಂದಿಗೆ ಅದೃಷ್ಟ ಪರೀಕ್ಷೆಗಿಳಿದಿರುವ ಮಹೇಶ್‌ಗೆ ಯೋಗೀಶ್ ಹುಣಸೂರ್ ಬೆಂಬಲವಾಗಿ ನಿಂತಿದ್ದಾರೆ. ಮೂಲತಃ ನಿರ್ದೇಶಕರಾದ ಯೋಗೀಶ್, 'ರಾವಣ', 'ಕೃಷ್ಣನ್ ಲವ್ ಸ್ಟೋರಿ' ಚಿತ್ರಗಳ ಕಾರ್ಯಕಾರಿ ನಿರ್ಮಾಪಕರಾಗಿದ್ದರು. ಮಹೇಶ್ ಹೇಳಿದ ಕಥೆ ಸಿನಿಮಾಕ್ಕೆ ಹೇಳಿ ಮಾಡಿಸಿದಂತಿದೆ ಅನ್ನಿಸಿದ್ದರಿಂದ ಅವರು ನಿರ್ಮಾಪಕರಾಗಿದ್ದಾರೆ.

ಪ್ರಜ್ವಲ್ ದೇವರಾಜ್ ಮುರಳಿಯಾಗಿ ನಟಿಸುತ್ತಿದ್ದಾರೆ. 'ನನ್ನ ವೃತ್ತಿ ಜೀವನದಲ್ಲಿದು ಭಿನ್ನ ಪಾತ್ರ' ಎಂದರು ಪ್ರಜ್ವಲ್. ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ತಲ್ಲಣಗಳಿಗೆ ಒಳಗಾಗುವ ತರುಣನ ಪಾತ್ರ ಅವರದ್ದು. ಪ್ರೇಮದ ಗ್ಲಾಮರ್, ಸಾಹಸದ ಗ್ರಾಮರ್ ಕೂಡ ಕಥೆಯಲ್ಲಿ ಇದೆಯಂತೆ. ರೀಮಾ ವರ್ಮಾ ಚಿತ್ರದ ನಾಯಕಿ. ಮೀರಾ ಪಾತ್ರದ, ಮುಂಬೈ ಬೇರಿನ ಈ ಚೆಲುವೆ ಈಗಾಗಲೇ 'ಗುಬ್ಬಿ' ಚಿತ್ರದಲ್ಲಿ ನಾಯಕಿಯಾಗಿ ಅಭಿನಯಿಸಿದ್ದಾಳೆ. ದರ್ಶನ್‌ರ 'ಶೌರ್ಯ' ಚಿತ್ರದಲ್ಲಿ ತಂಗಿಯ ಪಾತ್ರದಲ್ಲಿ ನಟಿಸಿದ್ದಾಳಂತೆ.

# ನಕ್ಸಲ್ ಪ್ರೇಮ ಪುರಾಣ!



'ಇತಿಹಾಸ' ಸೃಷ್ಟಿಸಿಯೇ ತೀರುವ ವಿಶ್ವಾಸ ನಾಯಕ ಕಂ ನಿರ್ಮಾಪಕ ಹರೀಶ್ ಅವರದ್ದು. 'ಇತಿಹಾಸ' ಚಿತ್ರದ ಆಹ್ವಾನ ಪತ್ರಿಕೆಯಲ್ಲಂತೂ ಅದ್ದೂರಿತನ ಎದ್ದು ಕಾಣುತ್ತಿತ್ತು. ಚಿತ್ರದ ನಿರ್ಮಾಣ ಕೂಡ ಅದ್ದೂರಿಯಾಗಿ ಇರಲಿದೆಯಂತೆ. ಹೇಳಿ ಕೇಳಿ, ಹರೀಶ್ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಪಳಗಿದವರು. ನಾಯಕನಾಗುವ ತಮ್ಮ ಕನಸಿಗೆ ತಾವೇ ಬಂಡವಾಳ ಹೂಡುವುದು ಅವರಿಗೆ ಕಷ್ಟವೇನೂ ಅನಿಸಿಲ್ಲ. ಹರೀಶ್ ಕನಸಿಗೆ ಅವರ ಗೆಳೆಯರು ಕೂಡ ಕೈ ಜೋಡಿಸಿದ್ದಾರೆ.

ಚಿತ್ರದ ನಾಯಕಿಯ ಹೆಸರು ರಾಣಿ. 'ಬಾಜಿ' ಹಾಗೂ 'ಪೆರೋಲ್' ಚಿತ್ರಗಳಲ್ಲಿ ನಟಿಸಿರುವುದು ಆಕೆಯ ಸಿನಿಮಾ ಇತಿಹಾಸ.

ಕೀರ್ತಿವರ್ಧನ 'ಇತಿಹಾಸ'ದ ನಿರ್ದೇಶಕರು. 'ತಂಗಾಳಿ' ಎನ್ನುವ ಅಪೂರ್ಣ ಚಿತ್ರದ ಕೀರ್ತಿ ಇವರದು. ನಕ್ಸಲ್ ಎನ್ನುವ ಬಿರುಗಾಳಿ ಹಾಗೂ ಪ್ರೇಮದ ತಂಗಾಳಿಯನ್ನು ಕಥೆಯಲ್ಲಿ ಹದವಾಗಿ ಹೆಣೆದಿದ್ದೇನೆ ಎಂದರು ವರ್ಧನ. ಚಿಕ್ಕಮಗಳೂರು, ಕುಶಾಲನಗರ, ದುಬಾರೆ ಅರಣ್ಯ ಪ್ರದೇಶಗಳಿಗೆ ಚಿತ್ರೀಕರಣಕ್ಕೆಂದು 'ಇತಿಹಾಸ' ತಂಡ ಕರೆದೊಯ್ಯಲು ನಿರ್ದೇಶಕರು ಸಿದ್ಧತೆ ನಡೆಸಿದ್ದಾರೆ. ಸಿನಿಟೆಲ್ ಸೂರಿ ಛಾಯಾಗ್ರಹಣ ಹಾಗೂ ಜೋಸೆಫ್ ಪೀಟರ್ ಸಂಗೀತ ಚಿತ್ರಕ್ಕಿದೆ. ■